ಹೋದದ್ದರಿಂದ ಎಲ್ಲರೂ ಚೆನ್ನಾಗಿರುವಾಗಲೇ ಭಾಗವಾಗಿಬಿಡುವುದು ಒಳ್ಳೆಯದು ಎಂದು ನಿರ್ಧರಿಸಿ, ಸಿದ್ದೇಗೌಡರು ತಮ್ಮಂದಿರಿಗೆ ಸಮಪಾಲು ಆಸ್ತಿ, ಒಬ್ಬರಿಗೆ ಒಂದೊಂದು ಹೊಸಮನೆ ನೀಡಿ ತಾವು ತಮ್ಮ ಭಾಗಕ್ಕೆ ಹಳೆಮನೆಯನ್ನೇ ಉಳಿಸಿಕೊಂಡಿದ್ದರು. ಅವರ ತಮ್ಮಂದಿರಿಬ್ಬರೂ ಅಣ್ಣನ ಹಾಗೂ ಅತ್ತಿಗೆಯ ದೊಡ್ಡ ಗುಣವನ್ನು ಮೆಚ್ಚಿಕೊಂಡು ಬಂದವರು.

ಎಮ್ಮೆಕಾಳಯ್ಯ ಭಾಗವಾದ ಮೇಲೆ ತಾನು, ತಮ್ಮ ಹೆಂಡತಿ, ಮಕ್ಕಳು ಸುಖವಾಗಿದ್ದರು. ಇವನಿಗೂ ಮೂರು ಜನ ಗಂಡುಮಕ್ಕಳಿದ್ದರು. ಆದರೆ ಅವರು ಯಾರೂ ಶಾಲೆಗೆ ಹೋಗಲಿಲ್ಲ. ಕಜ್ಜಿನಿಂಗಣ್ಣನಿಗೂ ಮೂವರು ಗಂಡುಮಕ್ಕಳು. ಅವರೂ ಯಾರೂ ಶಾಲೆಗೆ ಹೋಗಲಿಲ್ಲ. ಲಿಂಗೇಗೌಡರ ಸಂತಾನವೇ ಒಂದು ರೀತಿಯಲ್ಲಿ ಗಂಡು ಸಂತಾನ. ಭಾಗವಾದ ನಂತರ ಎಮ್ಮೆಕಾಳಯ್ಯ ಎಮ್ಮೆಗಳನ್ನು ಹೆಚ್ಚು ಹೆಚ್ಚಾಗಿ ತಂದು ಸಾಕುತ್ತಿದ್ದ. ಅವುಗಳ ಹಾಲಿನಿಂದ ಬರುತ್ತಿದ್ದ ಹಾಲನ್ನು ಪೇಟೆಯ ಐದಾರು ಹೋಟೆಲುಗಳಿಗೆ, ಊರಿನಲ್ಲಿ ಐದಾರು ಮನೆಗಳಿಗೆ ವರ್ತನೆಗೆ ಹಾಕಿ ಹಣ ಸಂಪಾದಿಸುತ್ತಾ ಹೋದ. ಮಕ್ಕಳೂ ಅದೇ ಕಸುಬನ್ನು ಮುಂದುವರಿಸಿ ಹೈನುಗಾರಿಕೆಯಲ್ಲಿ ಪಳಗಿಬಿಟ್ಟರು. ಅವನ ಮನೆಯಲ್ಲಿ ಒಮ್ಮೆಗೆ ಏಳೆಂಟು ಎಮ್ಮೆಗಳು ಹಾಲು ಕರೆಯುತ್ತಿದ್ದವು. ಹಾಗಾಗಿ ಅವನಿಗೆ ನಡುವೆ ಎಮ್ಮೆಕಾಳಯ್ಯ ಅಂತ ಅಡ್ಡ ಹೆಸರು ಬಂದು ಊರಿನಲ್ಲಿ 'ಎಮ್ಮೆಕಾಳಯ್ಯ' ಅಂತಲೇ ಕರೆಯಲ್ಪಡುತ್ತಿದ್ದನು.

ಕಜ್ಜಿನಿಂಗಣ್ಣನದು ಇನ್ನೊಂದು ಕಥೆ. ಆತ ಭಾಗವಾದ ಮೇಲೆ ತಾನು ತನ್ನ ಅವ್ವ ತಿಮ್ಮವ್ವನಿಂದ ಬಾಲ್ಯದಲ್ಲಿ ಕಲಿತಿದ್ದ ನಾಟಿ ಔಷಧಿಯ ವೃತ್ತಿಯನ್ನು ಮುಂದುವರಿಸಿದ್ದ. ಅದೇನೆಂದರೆ, ಕಜ್ಜಿ ಆದವರಿಗೆ ಗಿಡಮೂಲಿಕೆಯಲ್ಲಿ ತಾನೇ ತಯಾರಿಸಿದ ಔಷಧಿಯನ್ನು ಅವರಿಗೆ ಹಾಕುವುದು. ಆಗಿನ ಕಾಲದಲ್ಲಿ ಕಜ್ಜಿರೋಗ ಒಂದು ದೊಡ್ಡ ಬಾಧೆಯಾಗಿತ್ತು. ಅವನ ಹತ್ತಿರ ಔಷಧಿ ತೆಗೆದುಕೊಂಡು ಹೋಗಲು ದೂರದ ಊರುಗಳಿಂದ, ನೆರೆಯ ದೊಡ್ಡ ದೊಡ್ಡ ಪಟ್ಟಣಗಳಿಂದಲೂ ಗಾಡಿಕಟ್ಟಿಕೊಂಡು ರೋಗಿಯನ್ನು ಅವನ ಬಳಿಗೆ ಕರೆದುಕೊಂಡು ಬರುತ್ತಿದ್ದರು. ಅದರಿಂದ ಅವನಿಗೆ ನಿತ್ಯ ಆದಾಯ ಬರುವುದಕ್ಕೆ ಶುರುವಾಗಿತ್ತು. ಹೀಗಾಗಿ ಅವನನ್ನು ಊರಿನ ಜನ 'ಕಜ್ಜಿನಿಂಗಣ್ಣ' ಅಂತ ಅಡ್ಡ ಹೆಸರು ಇಟ್ಟಿದ್ದರು. ಯಾರಾದರೂ 'ಕಜ್ಜಿನಿಂಗಣ್ಣನ ಮನೆ ಎಲ್ಲಿ' ಅಂತ ಕೇಳಿದರೆ ಜನ ಅವನ ಮನೆಯನ್ನು ತೋರಿಸುತ್ತಿದ್ದರು. ಆತ ಸುತ್ತಳ್ಳಿಗಳಲ್ಲಿ ಅಷ್ಟೊಂದು ಪ್ರಸಿದ್ಧಿ ಪಡೆದಿದ್ದನು.

ಇಬ್ಬರು ಅಣ್ಣತಮ್ಮಂದಿರೂ ತಮ್ಮ ವ್ಯವಸಾಯದ ಜೊತೆಗೆ ಈ ಉಪಕಸುಬುಗಳನ್ನು ಇಟ್ಟುಕೊಂಡಿದ್ದರಿಂದ ಅವರ ಮನೆಗಳು ಆರ್ಥಿಕವಾಗಿ ದಿನೇ ದಿನೇ ಅಭಿವೃದ್ಧಿಯ ಕಡೆಗೆ ಸಾಗಿದ್ದವು. ಎಮ್ಮೆಕಾಳಯ್ಯ ಇದರ ಜೊತೆಗೆ ರೇಷ್ಮೆ ಸಾಗಾಣಿಕೆಯನ್ನೂ ತಮ್ಮ ಮನೆಯ ಉಪಕಸುಬನ್ನಾಗಿ ಮಾಡಿಕೊಂಡಿದ್ದ. ಸಿದ್ದೇಗೌಡ ತನ್ನ ಯಜಮಾನಿಕೆಯನ್ನು ತನ್ನ ಹೆಂಡತಿ ಚಿನ್ನವ್ವನಿಗೆ ವಹಿಸಿ ತನ್ನ ಅವ್ವ ತಿಮ್ಮವ್ವನಂತೆ ಬದುಕಿನ ಬಗ್ಗೆ ಏನೂ ತಲೆಕೆಡಿಸಿಕೊಳ್ಳದೆ ನಿಶ್ಚಿಂತೆಯಿಂದ ಇದ್ದನು. ಅವನು ಬಾಲ್ಯದಿಂದಲೂ ತನ್ನ ಹಿಂದೆಯೇ ಒಂದು ಕುರಿಯನ್ನೋ ಹೋತವನ್ನೋ ಕೈ ಮೇವು ಕೊಟ್ಟು ಪ್ರೀತಿಯಿಂದ ಸಾಕುತ್ತಿದ್ದರಿಂದ ಅವನನ್ನು 'ಕುರಿಸಿದ್ದೇಗೌಡ' ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. ಸಿದ್ದೇಗೌಡರ ಮಕ್ಕಳಲ್ಲಿ ರಾಜಣ್ಣನೊಬ್ಬ ಮಾತ್ರ ಅವರ ಪೈಕಿಯಲ್ಲಿಯೇ ಭಿನ್ನವಾಗಿದ್ದ. ಅವನಿಗೆ ತನ್ನ ಚಿಕ್ಕಪ್ಪಂದಿರ ಮಕ್ಕಳು ದಿನೇ ದಿನೇ ಆರ್ಥಿಕವಾಗಿ ಬಲಾಢ್ಯರಾಗುತ್ತಿರುವುದನ್ನು ಕಂಡು ತಾನೂ ಏನಾದರೂ ಹಣ ಸಂಪಾದನೆ ಮಾಡುವ ಕೆಲಸಗಳಿಗೆ ಕೈಹಾಕಬೇಕಲ್ಲ, ಇದಕ್ಕೆ ತಾನು ತನ್ನ ಅಣ್ಣಂದಿರಿಂದ ಬೇರೆ ಆಗುವುದೇ ಸೂಕ್ತ ಎಂಬ ತೀರ್ಮಾನಕ್ಕೆ ಬಂದಿದ್ದ.

ಎಮ್ಮೆಕಾಳಯ್ಯ ಮತ್ತು ಕಜ್ಜಿನಿಂಗಣ್ಣರನ್ನು ತಮ್ಮ ಅತ್ತಿಗೆ ಮನೆಗೆ ಕರೆಸಿಕೊಂಡು ತನ್ನ ಮಕ್ಕಳಿಗೆ ಆಸ್ತಿ ಪಾಲು ಮಾಡಿಕೊಟ್ಟು ಬಿಡಿ ಅಂದಾಗ ಅವರಿಗೆ ಆಶ್ಚರ್ಯವೂ ಆಯಿತು. ಅವರಿಗೆ ತಮ್ಮ ಅಣ್ಣ, ಅತ್ತಿಗೆಯ ಬಗ್ಗೆ ಅಪಾರ ಗೌರವ, ಪ್ರೀತಿ. ಹಿಂದೆ ಆಕೆ ತಮ್ಮ ಮನೆಗೆ ಮದುವೆಯಾಗಿ ಬಂದ ಮೇಲೆ ತಮ್ಮ ಮನೆಯಲ್ಲಿ ಸಂಪತ್ತು ಉಕ್ಕಿ ಹರಿಯುವುದಕ್ಕೆ ಶುರುವಾದಾಗ ಅವರು ಆಕೆಯನ್ನು ತಮ್ಮ ಮನೆಗೆ ಬಂದ ಭಾಗ್ಯದ ದೇವತೆ ಎಂಬ ಭಾವನೆಯಿಂದ ತಮ್ಮ ಎದೆಯಲ್ಲಿ ಇಟ್ಟುಕೊಂಡು ಬಂದವರು. ಈಗ ಮಕ್ಕಳಿಂದ ಇವಳಿಗೆ ಏನೋ ತೊಂದರೆ ತಾಪತ್ರೆ ಆಗುತ್ತಿದೆ ಎಂದು ಕ್ಷಣ ಚಿಂತಿಸಿದ್ದರು. ಆದರೆ ಆ ಮಕ್ಕಳನ್ನು ಮುಂದೆ ಹೀಗೇ ಒಟ್ಟಿಗೇ ಇರಲು ಬಿಡುವುದು ಒಳ್ಳೆಯದಲ್ಲ